ಗಂಟೆಯ ನಂತರ ಐಸ್ ಕ್ರೀಂ ತಿನ್ನುವ ಎಂದು ಅವನು ಎಲ್ಲರನ್ನೂ ಹೊರಡಿಸಿದ. ಕೃತಕವಾದ, ತೋರಿಕೆಯ ಮಾತುಗಳು ವ್ಯಕ್ತಿತ್ವವನ್ನು ಕುಬ್ಜಗೊಳಿಸುತ್ತಿರುವಂತೆ ಭಾಸವಾಗತೊಡಗಿ ಮಾತಿನಲ್ಲಿ ಭಾಗವಹಿಸುವುದು ಅವಳಿಗೆ ಕಷ್ಟವೆನಿಸತೊಡಗಿತ್ತು. ಹೀಗೆ ಮದುವೆಯ ದೃಷ್ಟಿಯಿದ ಯಾರೊಂದಿಗೆ ಮಾತಾಡುವಾಗಲೂ, ಬದುಕಿಡೀ ಆತನೊಂದಿಗೆ ಕಳೆಯುವುದು ಹೌದೇ ಎಂಬ ಯೋಚನೆ ಬಂದು ಮನಸ್ಸಿನೊಳಗೆ ದಿಗಿಲುಗುಟ್ಟುತ್ತಿತ್ತು.

ಬೇಡವೆಂದರೂ ಸಂದೇಶನ ನೆನಪು. ಆಫೀಸು ಮುಗಿದ ಮೇಲೆ ಅಲ್ಲೇ ಎದುರಿನ ಕಾಫೀ

